**<u>ದಿನಾಂಕಃ 06.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 3 ನೇ ಪ್ರತಿವಾದಿಗಳ ಪರ ಶ್ರೀ ವಿ.ಬಿ.ಎಂ. ವಕೀಲರಿಂದಃ</u>**

1. ದಾವೆಯನ್ನು ಪಂಚಾಯಿತಿ ಚೀಪ್ ಆಫೀಸರ ವಿರುದ್ದ ಸಲ್ಲಿಸಿರುತ್ತೇನೆ. ದಾವಾ ಆಸ್ತಿ ನಂ.950/4 ಆಗಿರುತ್ತದೆ. ಇದರ ಚಕಬಂದಿ ನಮೂದಿಸಿರುತ್ತೇನೆ. ಸದರಿ ಆಸ್ತಿಯನ್ನು ಪಂಚಾಯವರು ನನಗೆ ಉದ್ಯೋಗ ಮಾಡಲು ಸನ್ 2004 ರಲ್ಲಿ ನೀಡಿರುತ್ತಾರೆ. ಆಸ್ತಿಯನ್ನು ನೀಡಿರುತ್ತಾರೆ ಎಂದು ತೋರಿಸಲು ಉತಾರೆಯನ್ನು ಹಾಜರಪಡಿಸಿರುತ್ತೇನೆ. ಸನ್ 2004 ರಲ್ಲಿ ಪಟ್ಟಣಪಂಚಾಯಿತಿ ಇರಲ್ಲಿಲ್ಲಾ ಎಂದರೆ ಸರಿ. ಆಸ್ತಿಯನ್ನು ಪಂಚಾಯವರು ನನಗೆ ಉದ್ಯೋಗ ಮಾಡಲು ಸನ್ 2004 ರಲ್ಲಿ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪಟ್ಟಣಪಂಚಾಯಿತಿ ಸನ್ 2015 ರಲ್ಲಿ ಆಗಿರುತ್ತದೆ. ಸನ್ 2015 ಇಲ್ಲಿವರೆಗೂ ಪಂಚಾಯಿತಿಗೆ ಯಾವುದೇ ತೆರಿಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ. ಪಟ್ಟಣಪಂಚಾಯಿತಿ ಆದ ನಂತರ ನನ್ನ ಹೆಸರಿನಲ್ಲಿ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಸನ್ 2004 ರಿಂದ 2011-12 ವರೆಗಿನ ಉತಾರೆಗಳನ್ನು ಹಾಜರಪಡಿಸಿರುತ್ತೇನೆ. ಸದರಿ ದಾಖಲಾತಿಗಳು ಗ್ರಾಮ ಪಂಚಾಯಿತಿ ಇರುವ ಸಮಯದಲ್ಲಿ ತೆಗೆದುಕೊಂಡ ಉತಾರೆ ಎಂದರೆ ಸರಿ.

3. ಪಟ್ಟಣಪಂಚಾಯಿತಿ ಆದ ನಂತರ ಪಂಚಾಯಿತಿಯವರು ಗೌಟಾನ ಮತ್ತು ಪಂಚಾಯಿತಿ ಜಾಗವನ್ನು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಪರಿಶೀಲನೆ ಮಾಡಿದ ನಂತರ ಪಂಚಾತಿಯ ಜಾಗವನ್ನು ಅತೀಕ್ರಮಣ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅನಧಿಕೃತ ಕಟ್ಟಡ ಕಟ್ಟಿರುತ್ತಾರೆ ಎಂದು ಪಂಚಾಯಿತಿಯವರು ನೋಟಿಸ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ದಿಃ 10.04.2023 ರಂದು ಪಂಚಾಯಿತಿಯವರು ನನಗೆ ನೋಟಿಸ ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟಿಸ ನೀಡಿದಕ್ಕೆ ಜಾಗವನ್ನು ಖಾಲಿ ಮಾಡಿಸುತ್ತಾರೆ ಎಂದು ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನೋಟಿಸ ನೀಡಿದ ಕಾರಣ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಹಲವಾರು ಅಂಗಡಿಗಳು ಇರುತ್ತವೆ ಎಂದರೆ ಸರಿ. ಸರ್ಕಾರದವರು ಆಸ್ತಿ ನೀಡಿದ ಬಗ್ಗೆ ಠರಾವು ಮತ್ತು ಹಕ್ಕು ಪತ್ರ ಇಲ್ಲ ಎಂದರೆ ಸರಿ. ಗ್ರಾಮ ಪಂಚಾಯಿತಿಯವರು ಜೊತೆ ಮೀಲಾಪೆಯಾಗಿ ಖೊಟ್ಟಿ ಉತಾರೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ದಾವೆ ಸಲ್ಲಿಸಲು ಮುಂಚೆ ಪ್ರತಿವಾದಿಯರಿಗೆ ನೋಟಿಸ ನೀಡಿರುವುದಿಲ್ಲ ಎಂದರೆ ಸರಿ. ದಾಖಲಾತಿಗಳನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರದ ಆಸ್ತಿಯನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**